

# ಏನಿದು ವೆರಿಕೋಸ್ ವೇನ್ಸ್?

**ಕಾಲುಗಳ ರಕ್ತನಾಳಗಳಲ್ಲಿ ಊತ ಕಂಡುಬರುವ, ತಿರುಚಿದಂತಾಗಿ ಸುಗಮ ರಕ್ತಸಂಚಾರಕ್ಕೆ ಅಡಚಣೆಯಾಗುವ ಸಮಸ್ಯೆ ವೆರಿಕೋಸ್ ವೇನ್ಸ್. ಇದಕ್ಕೆ ಆಯುರ್ವೇದದಲ್ಲಿ ಉತ್ತಮ ಔಷಧಿಗಳಿದ್ದು, ಯಾವುದೇ ಅಡ್ಡಪರಿಣಾಮಗಳಿಲ್ಲದೆ ಗುಣಪಡಿಸಬಹುದು.**

■ ಉಮಾ ಅನಂತ್

ಬೆಂಗಳೂರಿನ ಅಂಜಲಿಗೆ ವಯಸ್ಸು ನಲವತ್ತೈದರ ಆಜುಬಾಜು. ಗಾರ್ಮೆಂಟ್ಸ್ ಒಂದರಲ್ಲಿ ಟೈಲರಿಂಗ್ ಕೆಲಸ ಮಾಡುವ ಇವರು ದಿನವಿಡೀ ಕುಳಿತೇ ಕೆಲಸ ಮಾಡುವುದರಿಂದ ಕಾಲುಗಳ ರಕ್ತನಾಳದಲ್ಲಿ ಊತ ಕಂಡುಬರಲಾರಂಭಿಸಿತು. ಊತದಿಂದ ಸೆಳೆತ, ವಿಪರೀತ ನೋವು ಅನುಭವಿಸಿದ ಅಂಜಲಿ, ವೈದ್ಯರ ಬಳಿ ತಪಾಸಣೆಗಾಗಿ ಹೋದಾಗ ಈಕೆಗೆ ‘ವೆರಿಕೋಸ್ ವೇನ್ಸ್’ ಎಂಬ ರಕ್ತನಾಳದ ಸಮಸ್ಯೆ ಇರುವುದು ಖಚಿತವಾಯಿತು.

ಸ್ಥೂಲಕಾಯ ಹಾಗೂ ಕುಳಿತೇ ಮಾಡುವ ಕೆಲಸದಿಂದ ಬಂದ ಈ ಸಮಸ್ಯೆ ನಿವಾರಣೆಗೆ ಅಂಜಲಿ ಆಯುರ್ವೇದ ವೈದ್ಯರ ಮೊರೆಹೋದರು. ಕಟ್ಟುನಿಟ್ಟಿನ ವ್ಯಾಯಾಮ, ಯೋಗ, ವೈದ್ಯರ ಸಲಹೆ ಮೇರೆಗೆ ಗಿಡಮೂಲಿಕೆಗಳಿಂದ ತಯಾರಿಸಿದ ಕಷಾಯ, ಪೌಷ್ಟಿಕಾಂಶಗಳ ಸೇವನೆಯಿಂದಲೇ ಈ ರೋಗಕ್ಕೆ ಪರಿಹಾರ ಕಂಡುಕೊಂಡರು.

### ಏನಿದು ವೆರಿಕೋಸ್ ವೇನ್ಸ್?

ಹೃದಯದಿಂದ ರಕ್ತವನ್ನು ದೇಹದ ವಿವಿಧ ಭಾಗಗಳಿಗೆ ಪೂರೈಕೆ ಮಾಡುವಲ್ಲಿ ರಕ್ತನಾಳದ ಪಾತ್ರ ಬಹಳ ಮಹತ್ವದ್ದು. ಹಾಗೆಯೇ ದೇಹದಲ್ಲಿರುವ ಮಲಿನ ರಕ್ತವನ್ನು ಹೃದಯ ಶುದ್ಧೀಕರಿಸಿ ದೇಹದ

